

# ಮಂಡ್ಯದ ಹುಡುಗರ 'ಆನೆಬಲ'

'ತ್ರಿಥಿ' ಸಿನಿಮಾದ ನಂತರ, ಆ ಚಿತ್ರದ ಮಂಡ್ಯ ಭಾಷೆಯನ್ನೇ ಅನುಕರಿಸಿಕೊಂಡು ಸಾಲು ಸಾಲು ಸಿನಿಮಾಗಳು ಬಂದವು. ಆ ಚಿತ್ರದ ಕಲಾವಿದರನ್ನು ಇಟ್ಟುಕೊಂಡೂ ಹಲವು ಸಿನಿಮಾಗಳು ಬಂದವು. ಆದರೆ ಅವುಗಳಲ್ಲಿ ಗೆಲುವು ಕಂಡವು ಯಾವುವೂ ಇಲ್ಲ. ಭಾಷೆ ಮತ್ತು ದ್ವಂದ್ವಾರ್ಥವನ್ನಷ್ಟೇ ಅಂಧವಾಗಿ ಅನುಕರಿಸಿಕೊಂಡು ಹೋಗಲು ಯತ್ನಿಸಿದ್ದು ಅವುಗಳ ಸೋಲಿಗೆ ಮುಖ್ಯ ಕಾರಣ.

ಇದೀಗ ಮಂಡ್ಯ ಗ್ರಾಮೀಣ ಸೊಗಡನ್ನು ಇಟ್ಟುಕೊಂಡಿರುವ ಇನ್ನೊಂದು ಸಿನಿಮಾ ಬರುತ್ತಿದೆ. ಅದರ ಹೆಸರು 'ಆನೆಬಲ'. ಯಾವ ಸಿನಿಮಾವನ್ನೂ ಅನುಕರಿಸುವ ಗೋಜಿಗೆ ಹೋಗದೆ. ಮಂಡ್ಯ ನೆಲದ ಕಥೆಯನ್ನು ಇಟ್ಟುಕೊಂಡು ಸಿನಿಮಾ ಕಟ್ಟಿದ್ದಾರಂತೆ ನಿರ್ದೇಶಕ ಸೂನಗಹಳ್ಳಿ ರಾಜು. ಚಿತ್ರರಂಗದ ಬೇರೆ ಬೇರೆ ವಿಭಾಗಗಳಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡಿ ಅನುಭವ ಇರುವ ರಾಜು ಅವರಿಗೆ ನಿರ್ದೇಶಕನಾಗಿ ಇದು ಮೊದಲ ಸಿನಿಮಾ. ಮೊದಲ ಪ್ರಯತ್ನದಲ್ಲಿಯೇ ಹಳ್ಳಿಯ ರಾ ಕಥೆಯೊಂದನ್ನು ಕೈಗೆತ್ತಿಕೊಂಡಿರುವುದು ಅವರ ಬಗ್ಗೆ ಕುತೂಹಲ ಹುಟ್ಟಿಸುತ್ತದೆ.

ಇತ್ತೀಚೆಗೆ 'ಆನೆಬಲ' ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ. ಮಂಡ್ಯ ನೆಲದ ಆಚರಣೆಗಳು, ಅಲ್ಲಿನ ಹೈಕಳ ತುಂಟಾಟ, ಹಳ್ಳಿಯ ರಾಜಕೀಯ ಇವುಗಳನ್ನೆಲ್ಲ ಸಮರ್ಥವಾಗಿ ಬಳಸಿಕೊಂಡಿರುವ ಟ್ರೈಲರ್‌ನಲ್ಲಿ ಕಾಣಿಸುತ್ತದೆ. ಈ ಚಿತ್ರದಲ್ಲಿ ಬಹುತೇಕ ಹೊಸ ಕಲಾವಿದರನ್ನೇ ಬಳಸಿಕೊಂಡಿರುವುದೂ ತಾಜಾತನಕ್ಕೆ ಇಂಬು ನೀಡುವಂತಿದೆ.

ಪಡ್ಡೆಹೈಕಳ ಸುತ್ತ ಹೆಣೆದ ಈ ಸಿನಿಮಾವನ್ನು ಜನತಾ ಟಾಕೀಜ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಸಾಗರ್ ಮತ್ತು ರಕ್ಷಿತಾ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಜಾನಪದ ಸೊಗಡಿನ ಸಂಗೀತಕ್ಕೇ ಹೆಸರಾದ ಪೂರ್ಣಚಂದ್ರ ತೇಜಸ್ವಿ 'ಆನೆಬಲ'ಕ್ಕೆ ಸಂಗೀತದ ಬಲ ತುಂಬಿದ್ದಾರೆ. ಕೆ.ಜಿ. ಬೆಟ್ಟೇಗೌಡ ಕ್ಯಾಮೆರಾದಲ್ಲಿ ಈ ಕಥನ ಸೆರೆಯಾಗಿದೆ. ■

# ಪೂಜಾ ಯು ಟರ್ನ್!

'ತ್ರಿಥಿ' ಸಿನಿಮಾದಲ್ಲಿ ಹಳ್ಳಿಯ ಮುಗ್ಧ ಹುಡುಗಿ ಕಾವೇರಿ ಪಾತ್ರದಲ್ಲಿ ಗಮನಸೆಳೆದಿದ್ದ ಪೂಜಾ, ಮತ್ತೆ 'ಮೂಕ ಹಕ್ಕಿ'ಯಾಗಿ ತೆರೆಯ ಮೇಲೆ ಕಾಣಿಸಿಕೊಂಡಿದ್ದರು. ಆದರೆ ಮೊದಲ ಸಿನಿಮಾಗೆ ಸಿಕ್ಕ ಸ್ಪಂದನ 'ಮೂಕಹಕ್ಕಿ'ಗೆ ಸಿಗಲಿಲ್ಲ. ಹಾಗೆಂದು ಪೂಜಾ ಸುಮ್ಮನೇನೂ ಕೂತಿಲ್ಲ. ಮೂರು ವಿಭಿನ್ನ ಪಾತ್ರಗಳೊಂದಿಗೆ ಬೆಳ್ಳಿತೆರೆಯ ಮೇಲೆ ಕಲರವ ಹುಟ್ಟಿಸಲು ಅವರು ಸಜ್ಜಾಗಿದ್ದಾರೆ.

'ದಾರಿ ಯಾವುದಯ್ಯಾ ವೈಕುಂಠಕೆ', 'ಯು ಟರ್ನ್ 2' ಮತ್ತು 'ಬೀದಿ ದೀಪ' – ಇವು ಪೂಜಾ ಕೈಯಲ್ಲಿ ಸದ್ಯಕ್ಕೆ ಇರುವ ಸಿನಿಮಾಗಳು. ಈ ಮೂರೂ ಪಾತ್ರಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ. ಚಂದನವನದಲ್ಲಿ ತನಗೆ ಭದ್ರವಾದ ಸ್ಥಾನವನ್ನು ಕಲ್ಪಿಸಿಕೊಡುತ್ತವೆ ಎನ್ನುವುದು ಅವರ ನಂಬಿಕೆ.

'ದಾರಿ ಯಾವುದಯ್ಯಾ ವೈಕುಂಠಕೆ' ಸಿನಿಮಾದಲ್ಲಿ ನನ್ನದು ಡಿ ಗ್ಲಾಮರಸ್ ಪಾತ್ರ. ನನ್ನ ಪಾತ್ರದ ಬಹುತೇಕ ಸನ್ನಿವೇಶಗಳು ಸ್ಮಶಾನದಲ್ಲಿಯೇ ನಡೆಯುತ್ತವೆ. ಹಾಗಾಗಿ ಬಹುಪಾಲು ಸ್ಮಶಾನದಲ್ಲಿಯೇ ಚಿತ್ರೀಕರಣ ನಡೆಸಬೇಕಾಗುತ್ತದೆ. ಅಲ್ಲಿನ ಬದುಕು ಹೇಗಿರುತ್ತದೆ ಎಂಬುದನ್ನು ತೋರಿಸುವ ಪ್ರಯತ್ನ ನಿರ್ದೇಶಕರು ಮಾಡಿದ್ದಾರೆ' ಎನ್ನುವುದು ಪೂಜಾ ವಿವರಣೆ.

ಇದುವರೆಗೆ ಡಿ ಗ್ಲಾಮರಸ್ ಪಾತ್ರಗಳಲ್ಲಿಯೇ ಕಾಣಿಸಿಕೊಂಡಿದ್ದ ಪೂಜಾ 'ಯು ಟರ್ನ್ 2' ಸಿನಿಮಾದಲ್ಲಿ ಹೊಸ ಬಗೆಯ ಪಾತ್ರದಲ್ಲಿ ಪ್ರತ್ಯಕ್ಷವಾಗುತ್ತಿದ್ದಾರೆ. 'ಇದುವರೆಗೆ ನೀವು ನೋಡಿರದ ಪೂಜಾ ಅವರನ್ನು ಈ ಸಿನಿಮಾದಲ್ಲಿ ನೋಡುತ್ತೀರಾ. ಈ ರೀತಿಯ ಪಾತ್ರಗಳನ್ನೂ ಮಾಡಬಲ್ಲೆ ಎಂಬುದನ್ನು ತೋರಿಸಿಕೊಡುವ ಸವಾಲಿನ ಪಾತ್ರ ನನ್ನದು' ಎಂದು ಅವರು ಉತ್ಸುಕತೆಯಿಂದ ಮಾತಾಡುತ್ತಾರೆ. 'ದಾರಿದೀಪ' ಕೂಡ ಅಷ್ಟೇ ಭಿನ್ನ ಪಾತ್ರ ಎನ್ನುವುದು ಅವರ ಅಂಬೋಣ.

ಸದ್ಯಕ್ಕೆ 'ದಾರಿ ಯಾವುದಯ್ಯಾ ವೈಕುಂಠಕೆ' ಸಿನಿಮಾದಲ್ಲಿ ಅವರು ತೊಡಗಿಕೊಳ್ಳಲಿದ್ದಾರೆ. ನಂತರ ಉಳಿದ ಎರಡು ಸಿನಿಮಾಗಳನ್ನು ಮುಗಿಸಿ ಹೊಸ ಸಿನಿಮಾ ಒಪ್ಪಿಕೊಳ್ಳುವ ಯೋಜನೆ ಪೂಜಾ ಅವರದ್ದು. ■

